# ಪ್ರೀತಿಯ ಮಕ್ಕಳೇ ದಯವಿಟ್ಟು ಗಮನಿಸಿ!

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ನಾನು ನಿಮ್ಮ ಪಂಚಾಯತ್ ಬಾಲಮಿತ್ರ.
ನಿಮ್ಮ ಸುರಕ್ಷತೆ ನನ್ನ ಆದ್ಯತೆಯಾಗಿದೆ!

ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ನಾವು, ಹಳ್ಳಿಯಲ್ಲಿ, ಶಾಲೆಯಲ್ಲಿ ಮತ್ತು ನಿಮ್ಮ ಮನೆಯಲ್ಲಿ ಸಹ ಮಕ್ಕಳ ಜೀವನವನ್ನು ಉತ್ತಮಗೊಳಿಸಲು ಮಕ್ಕಳ ಗ್ರಾಮಸಭೆಗಳ ಮೂಲಕ ನಿಮ್ಮ ಸಮಸ್ಯೆಗಳನ್ನು ಹಾಗೂ ಸಲಹೆಗಳನ್ನು ಕೇಳಿಸಿಕೊಳ್ಳುತ್ತಿದ್ದೆವು.

ಈ ವರ್ಷ ಕೋವಿಡ್–19 ನಿಂದಾಗಿ ನಾವು ನಿಮ್ಮನ್ನು ಮುಖಾಮುಖಿ ಭೇಟಿಯಾಗಲು ಸಾಧ್ಯವಾಗುತ್ತಿಲ್ಲ ಹಾಗಾಗಿ, ನಾವು ನಿಮ್ಮನ್ನು ತಲುಪಲು ಹಾಗೂ ನಿಮ್ಮ ಧನಿಗಳನ್ನು ಕೇಳಿಸಿಕೊಳ್ಳಲು ಹೊಸ ಮಾರ್ಗಗಳನ್ನು ಕಂಡುಕೊಂಡಿದ್ದೇವೆ.

## ನೀವು ಯಾವುದಾದರೂ ಸಮಸ್ಯೆಗಳನ್ನು ಎದುರಿಸುತ್ತಿದ್ದೀರಾ?




- **ನಿಮ್ಮ ಹಳ್ಳಿಯಲ್ಲಿ -** ಮೂಲಭೂತ ಸೌಲಭ್ಯಗಳಾದಂತಹ ನೀರಿನ ಸಮಸ್ಯೆಗಳು, ನೈರ್ಮಲ್ಯದ ಸಮಸ್ಯೆಗಳು, ಶಾಲೆ/ಕಾಲೇಜು/ಅಂಗನವಾಡಿ ಸೌಲಭ್ಯಗಳು, ಮುಂತಾದವುಗಳು?
- **ಮನೆಯಲ್ಲಿ** – ನಿಮಗೆ ಪೌಷ್ಟಿಕ ಆಹಾರ ದೋರೆಯುತ್ತಿದೆಯೇ? ನೀವು ಆರೋಗ್ಯವಾಗಿದ್ದೀರಾ? ನಿಮಗೆ ಏನಾದರು ಆತಂಕವಾಗುತ್ತಿದೆಯೇ ಅಥವಾ ನಿಮ್ಮನ್ನು ನಿರ್ಲಕ್ಷಿಸಲಾಗುತ್ತಿದೆಯೇ ಅಥವಾ ಯಾವುದಾದರೂ ರೀತಿಯಲ್ಲಿ ನೋವಾಗುತ್ತಿದೆಯೇ?

| | | | | |
|---|---|---|---|---|
|  ನಿಮ್ಮ ಸುತ್ತಲೂ ನೋಡಿ! | ನಿಮ್ಮ ಹಳ್ಳಿಯಲ್ಲಿನ ಸಮಸ್ಯೆಗಳ ಬಗ್ಗೆ ಆಲೋಚಿಸಿ  |  ಮನೆಯಲ್ಲಿನ ಸಮಸ್ಯೆಗಳು |  ನಿಮ್ಮ ಸುರಕ್ಷತೆ ಹಾಗೂ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳು (ನಿಂದನೆ, ಬಾಲ್ಯ ವಿವಾಹ, ದೌರ್ಜನ್ಯ, ಶಾಲೆ ಬಿಟ್ಟಿರುವುದು, ಜೀತ ಪದ್ದತಿ, ಬಾಲ ಕಾರ್ಮಿಕ ಪದ್ದತಿ, ಮಕ್ಕಳ ಕಳ್ಳ ಸಾಗಣಿಕೆ ಇತರೆ ಯಾವುದೇ ಸಂಕಷ್ಟಗಳು) | ನಿಮಗೆ ತೊಂದರೆ ಉಂಟು ಮಾಡುತ್ತಿರವ ಯಾವುದಾದರೂ ಸಮಸ್ಯೆಗಳು  |

## ಮಕ್ಕಳು ಹುಟ್ಟುತ್ತಲೇ ಪ್ರಜೆಗಳು!

**ನೀವು ಒಬ್ಬ ಸಕ್ರಿಯ ನಾಗರಿಕರಾಗಲು, ಬೆಳೆದು ದೊಡ್ಡವರಾಗಲೆಬೇಕೆಂದಿಲ್ಲ!**

## ಮಕ್ಕಳ ಕೋರಿಕೆ ಪತ್ರ



ಯಾವುದೇ ಅಂಗನವಾಡಿ ಶಿಕ್ಷಕರು ಅಥವಾ ನಿಮ್ಮ ಶಾಲಾ/ಕಾಲೇಜು ಶಿಕ್ಷಕರಿಂದ **ಮಕ್ಕಳ ಕೋರಿಕೆ ಪತ್ರವನ್ನು** ಪಡೆಯಿರಿ ಹಾಗೂ ಅದರಲ್ಲಿ ನಿಮ್ಮ ಸಮಸ್ಯೆಗಳನ್ನು ಭರ್ತಿಮಾಡಿ

ನಿಮ್ಮ ಕೋರಿಕೆ ಪತ್ರವನ್ನು ನಿಮ್ಮ ಶಾಲೆಯ/ಕಾಲೇಜಿನ ಶಿಕ್ಷಕರು ಅಥವಾ ಅಂಗನವಾಡಿ ಶಿಕ್ಷಕರಿಗೆ ಹಿಂತಿರುಗಿಸಿ ನಿಮ್ಮ ಹತ್ತಿರದ ಶಾಲೆಯಲ್ಲಿ/ಕಾಲೇಜಿನಲ್ಲಿ/ಅಂಗನವಾಡಿಯಲ್ಲಿ / ಡೈರಿ ಕೇಂದ್ರ/ ಪಂಚಾಯತ್ ಕಚೇರಿ/ ನ್ಯಾಯಬೆಲೆ ಅಂಗಡಿ, ಅಂಚೆ ಕಚೇರಿ ಅಥವಾ ಬ್ಯಾಂಕ್ ಈ ಸ್ಥಳದಲ್ಲಿ ಇಟ್ಟಿರುವ **ಮಕ್ಕಳ ಧನಿ ಬಾಕ್ಸ್**ನಲ್ಲಿ ಹಾಕಿ

## ಮಕ್ಕಳ ಧನಿ ಬಾಕ್ಸ್




- **ಮಕ್ಕಳೇ** – ನಿಮ್ಮ ಸಮಸ್ಯೆಗಳು/ಸಲಹೆಗಳನ್ನು/ಪ್ರಶ್ನೆಗಳನ್ನು **ಮಕ್ಕಳ ಕೋರಿಕೆ ಪತ್ರದಲ್ಲಿ** ಬರೆದು ಈ **ಮಕ್ಕಳ ಧನಿ ಬಾಕ್ಸ್‌ನಲ್ಲಿ** ಹಾಕಬಹುದು
- ಕೋರಿಕೆ ಪತ್ರ ಸಿಗದಿದ್ದಲ್ಲಿ ಒಂದು ಹಾಳೆಯಲ್ಲಿಯು ಕೂಡ ಬರೆದು ಹಾಕಬಹುದು